## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 620/2014

**ಸಾಕ್ಷಿಯನ್ನು ದಿಃ 04.12.2023 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | |
|---|---|---|
| ಹೆಸರು | ಶ್ರೀನಿವಾಸ | ಸಿ.ಡಬ್ಲ್ಯೂಃ 34 ಪಿ.ಡಬ್ಲ್ಯೂಃ 20 |
| ತಂದೆಯ ಹೆಸರು | ನರಸಿಂಹಶೆಟ್ಟಿ | |
| ವಯಸ್ಸು | 49 ವರ್ಷ | |
| ಕೆಲಸ | ಖಾಸಗಿ | |
| ವಾಸಸ್ಥಳ | ಹುಣಸೂರು | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

1. ಚಾಸಾ-1 ಹಾಗೂ 35 ನನಗೆ ಗೊತ್ತು. ಆರೋಪಿಯ ಪರಿಚಯ ಇಲ್ಲ. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆಗಳ ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿಪಿ.110 ಎಂದು, ಸಾಕ್ಷಿಯ ಸಹಿಯನ್ನು ನಿಪಿ.110(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 13 ವರ್ಷಗಳ ಹಿಂದೆ ಠಾಣೆಯಲ್ಲಿ ಚಾಸಾ-1 ರವರು ಸಹಿ ಮಾಡಲು ಹೇಳಿದ್ದಕ್ಕೆ ಸಹಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಬೇರೆ ಯಾರು ಸಹಿ ಮಾಡಿದ್ದಾರೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರ್ ಮಾಡಿಲ್ಲ, ಯಾವುದೇ ದಾಖಲಾತಿಗಳನ್ನು ವಶಪಡಿಸಿಕೊಂಡಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

## ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ

2. ದಿಃ 10.10.2013 ರಂದು ಸಂಜೆ 5.30 ರ ಸಮಯ ನಾನು ಹುಣಸೂರು ಪಟ್ಟಣ ಠಾಣೆಗೆ ಹೋಗಿ, ಚಾಸಾ-1 ರವರು ಪೊಲೀಸರಿಗೆ ಪ್ರಸ್ತುತ ಪ್ರಕರಣದಲ್ಲಿ ಒಂದು ಡಿ.ಡಿ 137413 ರ ಹಾಜರುಪಡಿಸಿದ್ದು, ಪೊಲೀಸರು ಅದನ್ನು ನನ್ನ ಹಾಗೂ ಚಾಸಾ-35 ರವರ ಸಮಕ್ಷಮ ವಶಪಡಿಸಿಕೊಂಡು, ಪೊಲೀಸರು ನನ್ನ ಹಾಗೂ ಚಾಸಾ-35 ರವರ ಸಹಿಯನ್ನು ಸ್ಥಳದಲ್ಲಿಯೇ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು

ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರು ಇಲ್ಲವೆಂದಿದ್ದಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ.,ಹುಣಸೂರು.